ಗಾಂಧೀಜಿ ಹತ್ಯೆ ಅವರನ್ನು ಇನ್ನಿಲ್ಲದಷ್ಟು ಕಂಗೆಡಿಸಿತಂತೆ! ಮುಂಚೇಕಡೆ ಚಟ್ಟೆಯೇರಿ, ಊರವರನ್ನು ಕಲೆ ಹಾಕಿಕೊಂಡು 'ದಾಸ್ಯದಿಂದ ಮನುಷ್ಯನಿಗೆ ಮುಕ್ತಿ ಸಿಗುವವರೆಗೂ ಈ ಸ್ವಾತಂತ್ರ್ಯವೊಂದು ಸ್ವಾತಂತ್ರ್ಯವೇ ಅಲ್ಲ!' ಭಾವ ಪರವಶರಾಗಿ ಆವೇಶದಿಂದ ಗಂಟೆಗಟ್ಟಲೆ ಮಾತನಾಡುತ್ತಾ ಊಟ ತಿಂಡಿ ಕೂಡಾ ಮಾಡದೇ ಕುಳಿತಿರುತ್ತಿದ್ದರಂತೆ! ಅಮ್ಮ ಶಾಲೆ ಮುಗಿಸಿ, ಯಾರ ಮನೆಯಲ್ಲೋ ಬಿಟ್ಟ ಅವನನ್ನು ಎತ್ತಿಕೊಂಡು, ಸುಸ್ತಾಗಿ ಮನೆ ಜಗುಲಿ ಮೆಟ್ಟಿಲೇರುವಷ್ಟೊತ್ತಿಗೆ, 'ವೈದೇಹಿ, ಎಲ್ರಿಗೂ ಒಂದ್ ಗುಟುಕ್ ಕಾಪಿ ಮಾಡ್ತಿಯಾ್ಯ ನೋಡ್!' ಎಂದು ಹಸಿವಿನಿಂದ ಕಂಗೆಟ್ಟ ಅಪ್ಪಯ್ಯ ಅತ್ಯಂತ ವಿನಯದಿಂದ ವಿನಂತಿಸಿಕೊಳ್ಳುತ್ತಿದ್ದರಂತೆ!

'ಯೆಂತಾ ವಿನಯ ಅಂತೀ!' ವೈದೇಹಿ ಗತದ ಅಕ್ಷಯ ಪಾತ್ರೆ ದೊಗೆದು ತಳವನ್ನೆಲ್ಲಾ ಹೆಮ್ಮೆಯಿಂದ ಮೊಗೆಯುವಾಗ ಶ್ರೀಪಾದನ ಮೈ ನಖಶಿಕಾಂತ ಕುದ್ದು ವೈದೇಹಿಯನ್ನು ದುರುದುರು ನೋಡುತ್ತಿದ್ದರೂ ಎಂದೂ ತುಟಿ ಎರಡು ಮಾಡಿದವನಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ, ಎಷ್ಟೋ ವರುಷಗಳವರೆಗೆ ಅಪ್ಪಯ್ಯ ಯಾಕೆ ಯಾರನ್ನೂ ಮದುವೆಯಾಗಿರಲಿಲ್ಲವೋ ಅವನಿಗೆ ತಿಳಿಯದು. ಕಡೇ ಗಳಿಗೆಯಲ್ಲಿ ಅಮ್ಮನನ್ನು ಯಾಕೆ ಕಟ್ಟಿಕೊಂಡರೋ ಅದೂ ತಿಳಿಯದು. ಗಾಂಧೀಜಿಯ ಕಟ್ಟಾ ಅಭಿಮಾನಿಯಾದ ಅವರು ಸ್ವಾತಂತ್ರ್ಯದ ನಂತರವೂ ಸದಾ ಕಾಲ ದೇಶ, ರಾಜಕೀಯವೆಂದು ಎಲ್ಲೆಲ್ಲೋ ಅಲೆದಾಡಿದ್ದೇ ಹೆಚ್ಚು. ಇದರ ಮಧ್ಯೆ ಇಂತಹದ್ದೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡು ಎಲ್ಲೋ ಸಂಧಿಸಿದ್ದ ಅಜ್ಜಯ್ಯನಿಗೆ ಹುಷಾರಿಲ್ಲವೆಂದು ಕಾಣಲು ಬಂದವರಿಗೆ ಅಮ್ಮನ ಪರಿಚಯವಾಗಿದ್ದಂತೆ. ಅಪ್ಪಯ್ಯನಿಗಾಗಲೇ ನಲವತ್ತಾರು ವರುಷ. ಅಮ್ಮನಿಗೆ ಇಪ್ಪತ್ತಾರು. ಹತ್ತಿರ ಹತ್ತಿರ ಇಪ್ಪತ್ತು ವರುಷಗಳ ಅಂತರ. ಅಮ್ಮನಿಗೆ ಅಮ್ಮನಿರಲಿಲ್ಲ. ಅಮ್ಮಮ್ಮ ಬದುಕಿದ್ದರೆ ಇಂತಹ ಮದುವೆಗೆ ಒಪ್ಪುತ್ತಿದ್ದರೋ ಇಲ್ಲವೋ ಯಾರಿಗೆ ಗೊತ್ತು? ವಯಸ್ಸಾಗಿ ಹಾಸಿಗೆ ಹಿಡಿದಿದ್ದ ಅಜ್ಜಯ್ಯ ಮಲಗಿದ್ದಲ್ಲೇ ಅಕ್ಷತೆ ಕಾಳು ಹಾಕಿ, ಕನ್ಯಾದಾನ ಮಾಡಿ ಹೊರೆ ಕಳಚಿಕೊಂಡರೆನ್ನಿಸುತ್ತೆ. ಅಜ್ಜಯ್ಯ ಆ ಕಾಲಕ್ಕೇ ಮದುವೆಯಾಗಿರದ ಅಮ್ಮನನ್ನು ಓದಿಸಿ, ಒಂದು ಶಾಲೆಯಲ್ಲಿ ಕೆಲಸಕ್ಕೆ ಸೇರಿಸಿ, ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡಿದ್ದರೆನ್ನುವುದೇ ಸಮಾಧಾನದ ಸಂಗತಿ. ಪ್ರಾಯಶಃ ಅದೊಂದೇ ತಮ್ಮಿಬ್ಬರನ್ನೂ ಮರ್ಯಾದೆಯಿಂದ ಬದುಕುವಂತೆ ಕಾಪಾಡಿದ್ದೆಂದು ಶ್ರೀಪಾದ ಕೆಲವೊಂದು ಮುಸ್ಸಂಜೆ ಹೀಗೆ ಯೋಚಿಸುವುದುಂಟು.

'ಮನೇಲಿ ಎಂತಿತ್ತು, ಆಸ್ತಿ ಎಷ್ಟಿತ್ತು, ಜಮೀನು, ತ್ವಾಟಯೆಲ್ಲಾ ಎಲ್ಲಿತ್ತು ನಂಗಿರ್ಲಿ, ಇವ್ರಿಗೂ ಸರೀ ಗೊತ್ತಿರ್ಲಿಲ್ಲ ಹೌದಲನಾ ಅಪ್ಪೀ. ಅತ್ತೆ ಸಾಯ್ವಾಗ ತಮ್ಮ ಮೈ ಮೇಲಿನ ದಾಗಿನ, ಹಳೇ ಬಂಗಾರ, ಬೆಳ್ಳಿಯೆಲ್ಲಾ ಪಾಲು ಮಾಡಿ ಕೊಟ್ಟಿಕ್ಕೆ ಇಷ್ಟಾದ್ರೂ ಇವ್ರಿಗೆ ಬಂದದಲ್ಲನಾ. ಅದನ್ನೂ ಅಣ್ಣಯ್ಯನ ಮನೇಲಿರ್ಲಿ, ಉರೂರು ಸುತ್ತೋ ನಂಗೆಂತಕ್ಕಂತಾ ಅಲ್ಲೇ ಬಿಟ್ ಬಂದುದಲಾ? ಪಾಲಲ್ಲಿ ಯೆಂತಾ ಬಂತಂತಾ ಕಣ್ಣಾರೆ ನಾ ಕೂಡಾ ಕಂಡಿದಲ್ಲಲಾ ಮಾರಾಯಾ.'

ಇಂತಹ ಕತೆ ಕೇಳುವಾಗೆಲ್ಲಾ ಶ್ರೀಪಾದನಿಗೆ ಮೈ ಪರಚಿಕೊಳ್ಳುವಂತಾಗುತ್ತದೆ. ಎಂದೂ ಆ ಮನೆಯ ಭಾಗವಾಗದೇ ಪರಕೀಯರಾಗುಳಿದು, ಮತ್ತದೇ ಮನೆಯ ಕತೆಯನ್ನು ಜೀವಮಾನದುದ್ದಕ್ಕೂ ಕೇಳುವಾಗೆಲ್ಲಾ ಅವನಿಗೇ ಅರ್ಥವಾಗದ ಒಂದು ಚಡಪಡಿಕೆ ಹುಟ್ಟಿಕೊಳ್ಳುತ್ತದೆ.

ಅವನಿಗೆ ನೆನಪಿದ್ದ ಹಾಗೆ ಅಪ್ಪಯ್ಯನ ಜೊತೆಗಿನ ಅಮ್ಮನ ಬಾಳೇನಿದ್ದರೂ ಒಂದೈದಾರು ವರುಷದಷ್ಟೇ. ಬಹುಶಃ ಅಮ್ಮನಿಗೂ ಆ ಮನೆಯ ಜೊತೆ ಅಂತಹ ನಿಕಟ ಬಾಂಧವ್ಯ ಬೆಳೆದಿರಲಿಲ್ಲವೇನೋ ಎನ್ನುವುದು ಅವನೊಳಗೇ ಕಾಡುವ ಸಂದೇಹ. ಅವನಿಗೆ ಅಮ್ಮಮ್ಮನನ್ನು ನೋಡಿದ ನೆನಪಿರಲಿಲ್ಲ. ಅವನು ಹುಟ್ಟಿ ಒಂದು ವರುಷಕ್ಕೆ ತೀರಿಕೊಂಡಿದ್ದರು. ಮರು ವರುಷವೇ ಅಜ್ಜಯ್ಯನೂ ತೀರಿಕೊಂಡಿದ್ದರು. ಅದೇ ಸಂದರ್ಭದಲ್ಲೇ ಅಮ್ಮನನ್ನು ಮತ್ತು ಎರಡು ವರುಷದ